ಸಂಕಟಕೆ ಗಡಿ ಇಲ್ಲ

-ದು.ಸರಸ್ವತಿ

ಪರಿಚಯ : ದು.ಸರಸ್ವತಿ ಬಳ್ಳಾರಿಯವರಾಗಿದ್ದು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರು ಜನಿಸಿದ್ದು ೧೯೬೩ ನಲ್ಲಿ. ಹೆಣೆದರೆ ಜೇಡನಂತೆ ಮತ್ತು ಜೀವಸಂಪಿಗೆ ಇವರ ಕವನ ಸಂಕಲನಗಳು. ಈಗೇನ್ಮಾಡೀರಿ ? ಎಂಬುದು ಇವರು ಬರೆದ ಅನುಭವ ಕಥನ.

ಮಾನವ ಎಂಬೋನು
ಮಣ್ಣಿಗೆ 'ಮಾಲೀಕ'
ಆದನೆಂಬ ಮತ್ತಿನಲಿ
ಗೆರೆ ಎಳೆದು ' ಗಡಿ '
ಎಂದ
ಹಮ್ಮಿನಲಿ 'ಬೀಗಲು'
ಕಾದಾಟದಾಟ ಆಡಿದ
ಜೀವಗಳು ಶವವಾದವು
ಗಡಿ ಆಚೆ -ಈಚೆ
ಎರಡೂ ಕಡೆ
ಹರಿದ ನೆತ್ತರೊಂದೆ
ಆದರೂ
ಗಡಿಯ 'ಮ್ಯಾಜಿಕ್' ನಿಂದ
ಜೀವತೆತ್ತವರು
'ವೀರಮರಣ'ಹೊಂದಿದವರು
ಜೀವ ತೆಗೆದವರು
'ವೀರಯೋಧ'ರಾದರು

ಒಡಲು ಅನುಭವಿಸುವ
ಸಂಕಟಕೆ
ಗಡಿಯೂ ಇಲ್ಲ
ಆಚೆ ಈಚೆಯೂ ಇಲ್ಲ.

ಭಾವಾರ್ಥ

ಪ್ರಪಂಚದಲ್ಲಿ ಎಲ್ಲಾ ಪ್ರಾಣಿಗಳಿಗೂ ಬದುಕುವ ಹಕ್ಕಿದೆ.ನಿಸರ್ಗ ಸಮತೋಲನದಲ್ಲಿ ಎಲ್ಲ ಸ್ತರದ ಜೀವಿಗಳೂ ಅನಿವಾರ್ಯ.ಆದರೆ ಮಾನವನು ತನ್ನ ಬುದ್ಧಿಶಕ್ತಿಯಿಂದ ಇತರ ಎಲ್ಲ ಜೀವಿಗಳ ಮೇಲೆ ಹಿಡಿತ ಸಾಧಿಸಿದ್ದಾನೆ.ತನ್ನಲ್ಲಿರುವ ಅಪ್ರತಿಮ ಮೇಧಾಶಕ್ತಿ ಮತ್ತು ವಾಕ್ಚಾತುರ್ಯದಿಂದ ಇತರ ಎಲ್ಲ ಜೀವಿಗಳಿಗಿಂತ ಮೇಲಿನವನೆನಿಸಿಕೊಂಡು ಕೊನೆಗೆ ತನ್ನ ಜೊತೆಗೇ ಜೀವಿಸುತ್ತಿರುವ ಜೀವಿಗಳ ಮೇಲೂ ತನ್ನ ಸರ್ವಾಧಿಕಾರದ ಮನೋಭಾವನೆಯನ್ನು ವ್ಯಕ್ತಪಡಿಸುತ್ತ ಭೂಮಿಯ ಮೇಲಿನ ಹಕ್ಕು ಕೇವಲ ತನ್ನದೆಂದು ಭಾವಿಸುತ್ತ ಅಧಿಕಾರದ ಅಹಮ್ಮಿನಿಂದ ಬೀಗುತ್ತಿದ್ದಾನೆ.

ಮಾನವನ ಅಧಿಕಾರದ ಮೋಹ, ಗಡಿವಿಸ್ತರಣೆಯ ದಾಹ ಇಂದು ನಿನ್ನೆಯದಲ್ಲ.ಕ್ರಿಸ್ತಪೂರ್ವ ಕಾಲದಿಂದ ಇಲ್ಲಿಯವರೆಗೂ ಜಗತ್ತನ್ನು ಗೆಲ್ಲುವ ಅಪೇಕ್ಷೆ, ಗಡಿವಿಸ್ತರಣೆಯ ದಾಹ, ಜನಾಂಗದ ಶ್ರೇಷ್ಠತೆಯ ಹಂಬಲ ಸರ್ವಾಧಿಕಾರಿ ಧೋರಣೆಗಳಿಂದ ಯುದ್ಧ ಸಂಭವಿಸಿ ಎಷ್ಟೋಜನರ ಸಾವುನೋವುಗಳಿಗೆ ಕಾರಣವಾಗಿದ್ದೇ ಅಲ್ಲದೆ, ಕೊನೆಯಲ್ಲಿ ಸ್ವತಃ ಯುದ್ಧವೇ ಯುದ್ಧಕ್ಕೆ ಕಾರಣರಾದವರನ್ನು ದಹಿಸಿತೆಂಬುದು ಇಂದು ಇತಿಹಾಸ.

ಸಾಮ್ರಾಟರು ತಮ್ಮ ಸಾಮ್ರಾಜ್ಯದ ತಮ್ಮ ಗಡಿಯನ್ನು ನಿರ್ಧರಿಸಿ ಅದನ್ನು ಇನ್ನೂ ವಿಸ್ತರಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ನೆರೆಯ ರಾಜ್ಯಗಳ ಮೇಲೆ ಆಕ್ರಮಣ ಮಾಡಿ ಆ ರಾಜ್ಯಗಳೊಂದಿಗೆ ತಮ್ಮ ಸಾಮ್ರಾಜ್ಯದ ಸಾವುನೋವಿಗೆ ಕಾರಣರಾಗಿದ್ದರೆಂಬುದು ಇತಿಹಾಸದ ಅಧ್ಯಯನದಿಂದ ತಿಳಿದು ಬರುತ್ತದೆ.

ಮನುಷ್ಯನ ಗಡಿವಿಸ್ತರಣೆಯ ದಾಹದಿಂದಾಗಿ ಇತಿಹಾಸದಲ್ಲಿ ಎಷ್ಟೋ ಯುದ್ಧಗಳು ಸಂಭವಿಸಿವೆ.ಯುದ್ಧದಲ್ಲಿ ಭಾಗವಹಿಸಿದ ಎರಡೂ ಪಕ್ಷಗಳ ಜನರಿಗೂ ಹಾನಿ ಸಂಭವಿಸಿದೆ. ಎಷ್ಟೋ ಜೀವಗಳು ಹತವಾಗಿವೆ.ಆದರೆ ಎರಡೂ ಕಡೆಯಲ್ಲಿ ಯುದ್ಧದಲ್ಲಿ ಭಾಗವಹಿಸಿ ಸಾವನ್ನಪ್ಪಿದ ಜನರ ದೇಹದಿಂದ ಹರಿದ ರಕ್ತವೊಂದೇ ಆಗಿದೆ.ಅಂದರೆ ಸಾವು ನೋವು ಯುದ್ಧದಲ್ಲಿ ಭಾಗವಹಿಸಿದ ಎರಡೂ ಕಡೆಯವರೂ ಅನುಭವಿಸುವುದು ಅನಿವಾರ್ಯವೇ ನಿಜ .ಆದರೂ ಗಡಿಯ ಮ್ಯಾಜಿಕ್ ಗೆ ಒಳಗಾಗಿ ತಮ್ಮ ದೇಶದ ಗಡಿ ರಕ್ಷಣೆ

ಮಾಡಬೇಕೆಂದೋ, ಗಡಿ ವಿಸ್ತರಿಸಬೇಕೆಂದೋ ಭಾಗವಹಿಸಿದವರು ಜೀವತೆರಬೇಕಾದುದು ಅನಿವಾರ್ಯವಾದಾಗ ಆ ಜೀವತೆತ್ತವರು ವೀರಮರಣ ಹೊಂದಿದವರೆಂಬ ಬಿರುದಿಗೆ ಪಾತ್ರರಾದರೆ ,ಎದುರಿನ ಪಕ್ಷದ ಸಾವುನೋವಿಗೆ ಕಾರಣರಾದವರು ,ಎದುರಾಳಿಗಳ ಜೀವ ತೆಗೆದವರು ವೀರಯೋಧರು ಎಂಬ ಗೌರವಕ್ಕೆ ಪಾತ್ರರಾದರು.

ಆದರೆ ಸಾವು ನೋವಿನ ವಿಷಯದಲ್ಲಿ ಎಲ್ಲರೂ ಅನುಭವಿಸುವ ನೋವು ಒಂದೇ ಆಗಿದೆ.ಎರಡೂ ಪಕ್ಷದ ಜನರೂ ಆಸ್ತಿಪಾಸ್ತಿಗಳ ಜೊತೆ ತಮ್ಮ ಬಂಧುಬಾಂಧವರನ್ನು ಕಳೆದುಕೊಂಡೋ ,ಅಥವಾ ಯುದ್ಧದಲ್ಲಿ ಸ್ವತಃ ತಾವೇ ನೋವನ್ನು ಅನುಭವಿಸುವುದು ಸಹಜವೇ ಆದರೂ ಒಡಲು ಅನುಭವಿಸುವ ಸಂಕಟಕೆ ಆಚೆ -ಈಚೆಯ ಗಡಿಗಳೆಂಬ ಯಾವುದೇ ತಾರತಮ್ಯವಿಲ್ಲ.ನೋವು ಅನುಭವಿಸುವಿಕೆ, ಕಳೆದುಕೊಳ್ಳುವಿಕೆಯ ನೋವು, ಸಾವುನೋವುಗಳು,ಅಗಲುವಿಕೆಯ ಸಂಕಟ ಎಲ್ಲರಿಗೂ ಒಂದೇ ಆಗಿದೆ. ಅದು ಅನುಭವಿಸುವವರಿಗೆ ಮಾತ್ರವೇ ವೇದ್ಯವಾಗುತ್ತದೆ.

ಜಾತಿಮತ ಪಂಥಗಳ ಮೌಢ್ಯ ಅಂಧಾನುಕರಣೆಯ ಫಲವಾಗಿ ಅಂತಃಕಲಹಗಳು ಸಂಭವಿಸಿ ನಿಜವಾಗಿಯೂ ಶ್ರಮಪಡುತ್ತಿರುವ ಜನರ ಶ್ರಮಕ್ಕೆ ,ನೋವಿಗೆ ಬೆಲೆಯಿಲ್ಲ.ಈ ನೋವು ಕಾಲ ದೇಶಗಳನ್ನು ದಾಟಿ ಹೋಗಿದೆಯಾದ್ದರಿಂದ ನೋವಿನ ವ್ಯಾಪ್ತಿ ಹಿರಿದಾದುದು ಎಂದು ಕವಯಿತ್ರಿಅಭಿಪ್ರಾಯಪಟ್ಟಿದ್ದಾರೆ.

ನನ್ನಾಸೆ - ಇಂದುಮತಿ ಲಮಾಣಿ

ಪರಿಚಯ : ಇಂದುಮತಿ ಲಮಾಣಿಯವರು ವಿಜಯಪುರ ಜಿಲ್ಲೆಯ ಬರಟಗಿಯ ಮೂರನೇ ತಾಂಡಾದಲ್ಲಿ ೧೯೫೫ ರಲ್ಲಿ ಜನಿಸಿದರು. ತಾಯಿಲೋಕ (ಕವನಸಂಕಲನ) ಭಾವಲೋಕ (ಜನಪದ ಕವನ ಸಂಕಲನ)ಏಕಾದಶ (ಕಥಾಸಂಕಲನ) ಕೊರಡು ಕೊನರುವುದು ಬರಡು ಹಯನಹುದು (ಕಾದಂಬರಿ) ಇತ್ಯಾದಿ ಇವರು ಬರೆದ ಕೃತಿಗಳು . 'ನನ್ನ ಸುತ್ತಲಿನ ಸತ್ಯಗಳು' ಇವರು ಬರೆದ ಇನ್ನೊಂದು ಕವನಸಂಕಲನ .ಪ್ರಸ್ತುತ ಪದ್ಯ ನನ್ನ ಸುತ್ತಲಿನ ಸತ್ಯಗಳು ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ಗೆಲ್ಲಬೇಕು ; ಬೀಸಲು ಬರುವ<br>
ಬಲೆಯಿಂದ ಪಾರಾಗಬೇಕು<br>
ತನ್ನನ್ನೇ ಸುಟ್ಟು -<br>
ಬೆಳಕು ನೀಡುವ ಬತ್ತಿ ನಾನಾಗಬೇಕು .<br>
ಮಣ್ಣಲ್ಲಿ ಮಣ್ಣಾಗಿ -<br>
ಮಣ್ಣ ಮೇಲೊಂದು ಮರವಾಗಿ -<br>
ಪುಣ್ಯವಂತರಿಗೆ ನೆರಳಾಗಬೇಕು.<br>
ಬತ್ತದ ವರತೆ -<br>
ಸದಾ ಚಿಮ್ಮುತ್ತಲಿರುವ ಚಿಲುಮೆ ನಾನಾಗಿ ;<br>
ದಾಹಗೊಂಡವರ ತನುವ ತಣಿಸುಂತಾಗಬೇಕು.<br>
ಅಳುವ ಕಂದನ ನಗಿಸಲು<br>
ಅಮ್ಮನ ಕಂಠದ ಜೋಗುಳ ನಾನಾಗಬೇಕು.<br>
ಮಾನವನ ಅಜ್ಞಾನತೆ ತೊಲಗಿಸಲು -<br>
ವಾಗ್ದೇವಿಯ ಕೈಯಲ್ಲಿರುವ ಗ್ರಂಥ ನಾನಾಗಿ ;<br>
ಧನ್ಯಳಾಗಬೇಕು.....<br>
ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ -<br>
ದೀನರ ಊರುಗೋಲು ನಾನಾಗಬೇಕು......<br>
ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ<br>
ಅಂತ್ಯ ನನ್ನದಾಗಬೇಕು.

ಸಾರಾಂಶ (ಭಾವಾರ್ಥ)

ಪರೋಪಕಾರಾರ್ಥಂ ಇದಂ ಶರೀರಂ ಎಂಬ ಉಪನಿಷತ್ತಿನ ವಾಕ್ಯದಂತೆ ಮಾನವ ತನಗೆ ಲಭಿಸಿದ ಈ ಜೀವನದ ಸಾರ್ಥಕತೆಯನ್ನು ಪರರಿಗೆ ಉಪಕಾರಿಯಾಗಿ ಬದುಕಬೇಕು ಎಂಬ ಸದಾಶಯ ಈ ಕವಿತೆಯಲ್ಲಿ ಮೂಡಿರುವುದನ್ನು ಕಾಣಬಹುದು. ದಿನಕರ ದೇಸಾಯಿಯವರ ಕವನದಲ್ಲಿ ಬಂದಿರುವ ಹಾಗೆ 'ನನ್ನ ದೇಹದ ಬೂದಿ ಗಾಳಿಯಲಿ ತೇಲಿ ಬಿಡಿ ,ಹೋಗಿ ಬೀಳಲಿ ಬತ್ತ ಬೆಳೆಯುವಲ್ಲಿ ,ಬೂದಿ ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ ಧನ್ಯವಾಯಿತು ಹುಟ್ಟು ಸಾವಿನಲ್ಲಿ ' ಎಂಬ ರೀತಿಯ ಆಶಯವನ್ನೇ ಈ ಕವಿತೆಯೂ ವ್ಯಕ್ತ ಪಡಿಸುವುದನ್ನು ಕಾಣಬಹುದು.

ಜೀವನ ಚೈತನ್ಯದಾಯಕವಾಗಿರಬೇಕಾದರೆ ,ಸಂತಸದಿಂದ ನೆಮ್ಮದಿಯಿಂದ ಕೂಡಿರಬೇಕಾದರೆ ನಿಸ್ವಾರ್ಥವಾದ ತ್ಯಾಗ ಜೀವನವನ್ನು ರೂಢಿಸಿಕೊಳ್ಳಬೇಕು.ಕವಯಿತ್ರಿ ಈ ಕವನದಲ್ಲಿ ಹೇಳುವಹಾಗೆ ಗೆಲ್ಲಬೇಕು ಎಲ್ಲ ರೀತಿಯ ಸಂದರ್ಭಗಳನ್ನೂ ,ಸಮಸ್ಯೆಗಳನ್ನೂ ,ಸವಾಲುಗಳನ್ನೂ . ಮನುಷ್ಯನ ಮೇಲೆ ಒಂದಿಲ್ಲೊಂದು ರೀತಿಯ ಸಮಸ್ಯೆಗಳು ಬಲೆ ಬೀಸಲು ಸದಾಹೊಂಚು ಹಾಕುತ್ತಿರುತ್ತವೆ. ಹಾಗೆ ಬೀಸಿಬರುವ ಬಲೆಯಿಂದ ಬಿಡಿಸಿಕೊಳ್ಳುವ ಚಾಕಚಕ್ಯತೆ ನಮ್ಮದಾಗಿರಬೇಕು. ಜೀವನ ಕೇವಲ ತನಗಾಗಿ ಮಾತ್ರವಲ್ಲ. ತನ್ನವರಿಗಾಗಿ,ತನ್ನ ಸುತ್ತಲಿನವರಿಗಾಗಿ ,ಪರರಿಗಾಗಿ ಎಂಬುದನ್ನು ಮನಗಾಣಬೇಕು.ಬೆಳಕು ನೀಡುವ ಬತ್ತಿ ತನ್ನನ್ನು ತಾನು ದಹಿಸಿಕೊಂಡು ಸುತ್ತಲಿನವರಿಗೆ ಬೆಳಕು ನೀಡುವುದು. ಆ ರೀತಿಯ ಬತ್ತಿಯ ಬದುಕು ತನ್ನದಾಗಬೇಕು. ಮಣ್ಣಲ್ಲಿ ಮಣ್ಣಾಗಿ , ಮಣ್ಣ ಆಶ್ರಯದಲ್ಲಿ ಬೆಳೆದು ಪುಣ್ಯವಂತರಿಗೆ ನೆರಳು ನೀಡುವ ಮರವಾಗಬೇಕು ,ನೆರಳಾಗಬೇಕು . ಸದಾಕಾಲ ಚಿಮ್ಮುವ ಎಂದೂ ಬತ್ತದ ವರತೆಯಾಗಿ , ದಾಹದಿಂದ ಬಳಲುತ್ತಿರುವವರಿಗೆ ತಂಪು ನೀಡುವ ಚಿಲುಮೆಯಾಗಬೇಕು.ಅಳುವ ಕಂದನ ಸಾಂತ್ವನಗೊಳಿಸುವ ಏಕೈಕ ಧ್ವನಿ ಅಮ್ಮನ ಜೋಗುಳ ,ಆ ಜೋಗುಳ ತಾನಾಗಬೇಕು.

ಮನುಷ್ಯರಲ್ಲಿ ಹುದುಗಿರುವ ಅಜ್ಞಾನ ಮೌಢ್ಯಗಳನ್ನು ತೊಡೆದು ಹಾಕುವ ವಾಗ್ದೇವಿಯ ಕೈಯಲ್ಲಿನ ಗ್ರಂಥ ತಾನಾಗಬೇಕು,ಆ ಮೂಲಕ ಅವರಲ್ಲಿರುವ ಅಜ್ಞಾನದ ಕತ್ತಲೆ ಹೋಗಲಾಡಿಸಿ ಧನ್ಯತೆಯನ್ನು ಹೊಂದಬೇಕು.

ಸಮಾಜದಲ್ಲಿ ಎಷ್ಟೋ ಜನರು ದಿಕ್ಕಿಲ್ಲದೆ ಅನಾಥರಂತೆ ನರಳಾಡುತ್ತಿದ್ದಾರೆ. ಅಂತವರಿಗೆ ಆಸರೆಯಾಗುವ ಊರುಗೋಲು ತಾನಾಗಬೇಕು . ಕೊನೆಗೊಮ್ಮೆ ಶಕ್ತಿಹೀನವಾಗಿ ಇನ್ನೊಬ್ಬರಿಗೆ ಹೊರೆಯಾಗುವುದಕ್ಕೆ ಮೊದಲೇ ತಾನು ಅಂತ್ಯ ಕಾಣಬೇಕು.

ಕೇವಲ ತನ್ನ ಸುಖಕ್ಕಾಗಿ ಹಂಬಲಿಸದೇ , ಪರರ ಒಳಿತಿಗಾಗಿಯೂ ಬದುಕುವುದರಲ್ಲ ಸಮಾಧಾನ ,ಸಂತೃಪ್ತಿಗಳನ್ನು ಕಾಣಬೇಕು ಎಂಬುದು ಕವಯಿತ್ರಿಯ ಹಂಬಲವಾಗಿದೆ.

mamatabhagwat1@gmail.com